





# ಆ 6 ಹುಡುಗಿಯರು!



ಒಂದು ಮಗುವಿನ ಹೆರಿಗೆ ಸಾಮಾನ್ಯ. ಅಪರೂಪಕ್ಕೆ ಅವಳಿ–ಜವಳಿ ಹುಟ್ಟುವುದೂ ಉಂಟು. 3, 4, 5 ಹುಟ್ಟುವುದು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. 6 ಮಕ್ಕಳನ್ನು ಹಡೆಯುವದು 45 ಲಕ್ಷ ಗರ್ಭಿಣಿಯರಲ್ಲಿ ಒಬ್ಬಳು ಮಾತ್ರ. ಅವುಗಳಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳು ವರ್ಷ ತುಂಬುವ ಮುನ್ನವೇ ಸಾವನ್ನಪ್ಪುತ್ತವೆ– ಇದು ವೈದ್ಯರು ಕೊಡುವ ಲೆಕ್ಕ.

ಈ ಚಿತ್ರ ನೋಡಿ– ಇಲ್ಲಿರುವ ಆರೂ ಯವತಿಯರು, ಒಂದೇ ಗರ್ಭದಲ್ಲಿ ಅಂಕುರಿಸಿ, ಬೆಳೆದು; ಒಂದೇ ಹೆರಿಗೆಯಲ್ಲಿ ಹುಟ್ಟಿದವರು!

1983ರ ನವೆಂಬರ್ 18ರಂದು ಹುಟ್ಟಿದ ಈ ಹುಡುಗಿಯರಿಗೆ ಈಗ 27ರ ಹರೆಯ. ಇವರ ತಾಯಿ ಜೆನೆಟ್ ವಾಲ್ಟನ್ 12 ಅಸಫಲ ಗರ್ಭಧಾರಣೆಯ ನಂತರ, ಇನ್‌ವ್ಹಿಟ್ರೊ ಫರ್ಟಿಲೈಜೇಶನ್ ಚಿಕಿತ್ಸೆಯ ಮೂಲಕ ಗರ್ಭ ಧರಿಸಿದರು. ಮಕ್ಕಳಿಗಾಗಿ ಬಹಳ ವರ್ಷಗಳಿಂದ ಹಂಬಲಿಸುತ್ತಿದ್ದ ಈ ತಾಯಿ, ಹೆರಿಗೆಯಲ್ಲಿ ಒಂದಲ್ಲ, ಎರಡಲ್ಲ.. ಆರು ಮಕ್ಕಳನ್ನೇ ಪಡೆದುಬಿಟ್ಟಳು! ಆರೂ ಹೆಣ್ಣೇ ಎಂಬುದು ವಿಶೇಷ. ಈ ಮಕ್ಕಳಲ್ಲಿ 1 ಪೌಂಡ್ 1 ಔನ್ಸ್‌ನಷ್ಟು ಕಡಿಮೆ ತೂಕದ ಮಗವೂ ಇತ್ತು; ಹಾಗೆಯೇ 3 ಪೌಂಡ್ 80 ಔನ್ಸನಷ್ಟು ಹೆಚ್ಚು ತೂಕದ ಮಗುವೂ ಇತ್ತು.

ಮಕ್ಕಳು ಹುಟ್ಟಿದ ಖುಷಿಯಲ್ಲಿ ತಂದೆ ಗ್ರಹಾಂ ವಾಲ್ಟನ್ ತನ್ನ ಕೆಲಸಕ್ಕೆ ವಿರಾಮ ನೀಡಿ ಪೂರ್ಣಾವಧಿ ಮಕ್ಕಳ ಆರೈಕೆಗಾಗಿಯೇ ನಿಂತು ಬಿಟ್ಟ. ಒಂದೇ ಹೆರಿಗೆಯಲ್ಲಿ ಆರೂ ಹೆಣ್ಣು ಹುಟ್ಟಿ, ಆರೋಗ್ಯಪೂರ್ಣವಾಗಿ ಬೆಳೆದು, ಯೌವನಾವಸ್ಥೆಗೆ ತಲುಪಿರುವ, ವಾಲ್ಟನ್ ಕುಟುಂಬದಂತಹ ಬೇರೆ ಕುಟುಂಬ ಇಡೀ ಜಗತ್ತಿನಲ್ಲಿಯೇ ಇಲ್ಲವಂತೆ! ಅಂದ ಹಾಗೆ ಈ ಕುಟುಂಬ ಇಂಗ್ಲೆಂಡಿನ ವೇಲ್ಸ್‌ನಲ್ಲಿದೆ.

ಈಗ ಈ ಆರೂ ಹೆಣ್ಣುಮಕ್ಕಳು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. ಕೆಲವರು ತಮ್ಮ ಬಾಳ ಸಂಗಾತಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. 60ರ ಹರೆಯದ ಗ್ರಹಾಂ ವಾಲ್ಟನ್ ಹಾಗೂ ಅವನ ಹೆಂಡತಿ 58ರ ಜೆನೆಟ್ ವಾಲ್ಟನ್‌ರಿಗೆ ಒಂದೇ ಒಂದು ಆತಂಕ ಕಾಡುತ್ತಿದೆ. ಮಕ್ಕಳೆಲ್ಲ ಲಗ್ನವಾಗಿ ತಮ್ಮ ಗಂಡಂದಿರ ಜೊತೆಗೆ ಹೋದ ಮೇಲೆ, ತಮ್ಮ ಮನೆ ನಿಶ್ಶಬ್ದವಾಗಿ ಭಣಗುಡುತ್ತದಲ್ಲ ಎಂಬುದೇ ಅವರ ಚಿಂತೆ.

■ ಸುಭಾಸ ಯಾದವಾಡ